

بِسۡمِ اللّٰہِ الرَّحۡمٰنِ الرَّحِیۡمِ

# ಅನ್ಯರ ಲೋಪ ದೋಷಗಳನ್ನು ಬಹಿರಂಗಪಡಿಸಬೇಡಿರಿ. ಅವರಿಗಾಗಿ ಪ್ರಾರ್ಥಿಸಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 31-03-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಲೋಕದಲ್ಲಿ ಯಾರೇ ಆಗಲಿ ಪ್ರತಿಯೊಂದು ನ್ಯೂನತೆಯಿಂದ ಸಂಪೂರ್ಣ ರೀತಿಯಲ್ಲಿ ಮುಕ್ತನಾಗಿ ಪರಿಶುದ್ಧನಾಗಿರುವುದಿಲ್ಲ. ಅಲ್ಲಾಹನ **ಸತ್ತಾರ್** ಎಂಬ ಗುಣವು ನಮ್ಮ ನ್ಯೂನತೆಗಳನ್ನು ಮರೆಮಾಡುತ್ತವೆ. ಮನುಷ್ಯನ ತಪ್ಪುಗಳ, ನ್ಯೂನತೆಗಳ ಮತ್ತು ಪಾಪಗಳ ಮೇಲಿನಿಂದ ಪರದೆ ಸರಿಯಲು ಪ್ರಾರಂಭಿಸುವುದಾದರೆ ಯಾರಿಗೂ ತನ್ನ ಮುಖ ತೋರಿಸಲು ಮನುಷ್ಯನಿಗೆ ಸಾಧ್ಯವಾಗಲಾರದು. ಅಲ್ಲಾಹನು **ಸತ್ತಾರುಲ್ ಉಯೂಬ್** (ನ್ಯೂನತೆಗಳಿಗೆ ಪರದೆ ಹಾಕುವವನು) ಮತ್ತು **ಗಫ್ಫಾರುಝ್ಝುನೂಬ್** (ಪಾಪಗಳನ್ನು ಬಹಳ ಕ್ಷಮಿಸುವವನು) ಆಗಿದ್ದಾನೆ. ಅವನು ನಮ್ಮ ಮೇಲೆ ದಯೆದೋರಿಸಿ, ನಮಗೆ ಇಸ್ತಿಗ್‌ಫಾರ್ ಪ್ರಾರ್ಥನೆ ಕಲಿಸಿ ಹೇಳಿದ್ದಾನೆ: ನೀವು ನಿಮ್ಮ ತಪ್ಪುಗಳಿಂದಲೂ ನ್ಯೂನತೆಗಳಿಂದಲೂ ನಿಮ್ಮನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತಾ ಇರಬೇಕು. ಅದರೊಂದಿಗೆ ಇಸ್ತಿಗ್‌ಫಾರ್ ಪ್ರಾರ್ಥನೆ ಸಹ ಮಾಡುತ್ತಾ ಇರಬೇಕು. ಆಗ ನಾನು ನಿಮ್ಮ ಪಾಪಗಳನ್ನು ಕ್ಷಮಿಸುವೆನಲ್ಲದೆ ನಿಮ್ಮ ಕುಂದು ಕೊರತೆಗಳನ್ನು ಮರೆಮಾಡುವೆನು ಎಂದು. ನಿಮ್ಮ ಪ್ರಾರ್ಥನೆಗಳನ್ನು ಅಂಗೀಕರಿಸುವೆನು ಎಂದು ಹೇಳಿದ್ದಾನೆ. ಸಾಮಾನ್ಯವಾಗಿ ಅಲ್ಲಾಹನು ಪ್ರತಿಯೊಬ್ಬನ ಬಹಳಷ್ಟು ಪಾಪಗಳ ಮೇಲೂ ಪರದೆ ಹಾಕುತ್ತಾನೆ. ಆದರೆ ವಿಶಿಷ್ಟವಾಗಿ ಅಲ್ಲಾಹನ ಕ್ಷಮೆಯು, ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುವವರನ್ನು ತನ್ನ ಚಾದರಿನಲ್ಲಿ ಸುತ್ತುತ್ತವೆ. **ಗಫರ್** ಎಂಬುದರ ಅರ್ಥ ಅಡಗಿಸುವುದು ಮತ್ತು ಮರೆಮಾಡುವುದು ಎಂದಾಗಿದೆ. **ಸಿತ್‌ರ್** ಎಂಬ ಶಬ್ದದ ಅರ್ಥ ಸಹ ಹೆಚ್ಚುಕಮ್ಮಿ ಇದೇ ಆಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಇಸ್ಲಾಮ್ ಪ್ರಸ್ತಾಪಿಸುವ ಮತ್ತು ಮುಸ್ಲಿಮರು ನಂಬುವ ಅಲ್ಲಾಹನು **ರಹೀಮ್** (ಕಾರುಣ್ಯ ನಿಧಿ) **ಕರೀಮ್** (ಕೃಪಾಮಯಿ) **ಹಲೀಮ್** (ಸಹಿಷ್ಣು) **ತವ್ವಾಬ್** (ಪಶ್ಚಾತ್ತಾಪ ಸ್ವೀಕರಿಸುವವನು) ಮತ್ತು **ಗಫ್ಫಾರ್** (ಬಹಳ ಕ್ಷಮಿಸುವವನು) ಆಗಿದ್ದಾನೆ. ಸತ್ಯವಾದ ತೌಬ ಮಾಡುವವನ ಪಶ್ಚಾತ್ತಾಪವನ್ನು ಅಲ್ಲಾಹನು ಅಂಗೀಕರಿಸುತ್ತಾನೆ ಮತ್ತು ಅವನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ಲೋಕದ ಜನರು ಹೇಗಿದ್ದಾರೆಂದರೆ ಒಬ್ಬ ವ್ಯಕ್ತಿ ಯಾವುದಾದರೂ ಪಾಪಕೃತ್ಯ ಮಾಡುವುದನ್ನು ತ್ಯಜಿಸಿದರೂ ತನ್ನ ನ್ಯೂನತೆಯನ್ನು ಹೋಗಲಾಡಿಸಿದರೂ ಜನರು ಅವನನ್ನು ನ್ಯೂನತೆಕೂಡಿದವನೆಂಬ ಸಂಶಯ ದೃಷ್ಟಿಯಿಂದ ನೋಡುತ್ತಾರೆ. ಆದರೆ ಅಲ್ಲಾಹನು ಎಂತಹ ಕೃಪಾಮಯನಾಗಿದ್ದಾನೆಂದರೆ ಮನುಷ್ಯನು ಸಾವಿರಾರು ತಪ್ಪು ಕೆಲಸಗಳನ್ನು ಮಾಡಿದ ನಂತರ ಸಹ ಅವನ ಕಡೆಗೆ ಪಾಶ್ಚಾತ್ತಾಪದಿಂದ ತಿರುಗುವುದಾದರೆ ಅವನನ್ನು ಕ್ಷಮಿಸುತ್ತಾನೆ. ಪ್ರವಾದಿಗಳ ಹೊರತು ಅಲ್ಲಾಹನ ಹಾಗೆ ಇಷ್ಟೆಲ್ಲಾ ರೀತಿಯಲ್ಲಿ ಕ್ಷಮಿಸುವವರು ಮನುಷ್ಯರಲ್ಲಿ ಯಾರೂ ಇಲ್ಲ. ಅಲ್ಲಾಹನ ನಂತರ ಪ್ರವಾದಿಗಳು ಹೀಗೆ ಮಾಡಬಲ್ಲರು. ಇವರ ಹೊರತು ಬೇರೆ ಯಾರೂ ಹೀಗೆ ಮಾಡುವುದಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಅಲ್ಲಾಹನ **ಸತ್ತಾರ್** ಎಂಬ ಗುಣ ಹೇಗಿದೆ ಎಂದರೆ ಅವನು ಮನುಷ್ಯನ ತಪ್ಪುಗಳನ್ನೂ ಪಾಪಕೃತ್ಯಗಳನ್ನೂ ನೋಡುತ್ತಾನೆ. ಆದರೆ ಮನುಷ್ಯನು ತನ್ನ ಕೃತ್ಯಗಳಲ್ಲಿ ಮಿತಿಮೀರಿ ಮುಂದುವರಿಯುವ ತನಕ ಅವುಗಳನ್ನು ಅಲ್ಲಾಹನು ಮರೆಮಾಡುತ್ತಾನೆ. ಆದರೆ ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯ ಮಾಡಿದ ತಪ್ಪನ್ನು ಸ್ವತಃ ಕಾಣದೆ ಇದ್ದರೂ ಸಹ ಆರೋಪ ಹೊರಿಸುತ್ತಾನೆ. ಆದುದರಿಂದ ನೀವು ಚಿಂತಿಸಿರಿ, ಅಲ್ಲಾಹನ **ಕರೀಮ್** ಮತ್ತು **ರಹೀಮ್** ಎಂಬ ಗುಣಗಳು ಎಷ್ಟು ವೈಭವಶಾಲಿ ಗುಣಗಳಾಗಿವೆ. ಅಲ್ಲಾಹನು ಜನರ ಪಾಪಕೃತ್ಯಗಳಿಗೋಸ್ಕರ ಕೂಡಲೆ ಅವರನ್ನು ಹಿಡಿಗೂಡುವವನಾಗಿದ್ದರೆ ಎಲ್ಲರನ್ನೂ ಅವನು ನಾಶ ಮಾಡುತ್ತಿದ್ದನು. ಆದರೆ ಅವನ **ಕರಮ್** (ಕೃಪೆ) ಮತ್ತು **ರಹಮ್** (ಕಾರುಣ್ಯ) ಬಹಳ ವಿಶಾಲವಾಗಿವೆ. ಅವು ಅವನ ಕ್ರೋಧದ ಗುಣಕ್ಕಿಂತಲೂ ಮಿಗಿಲಾದ ಸ್ಥಾನ ಪಡೆದಿದೆ.

ಆದುದರಿಂದ ನಾವು ಈ ವಿಷಯವನ್ನು ಮನವರಿಕೆ ಮಾಡಿಕೊಳ್ಳಬೇಕು. ನಮ್ಮ ಸಂಗಡಿಗರ, ನಮ್ಮ ಸಹೋದರರ, ನಮ್ಮೊಂದಿಗೆ ಸಂಬಂಧ ಹೊಂದಿರುವವರ ವ್ಯವಹಾರಗಳ ಬಗ್ಗೆ ನ್ಯೂನತೆಗಳನ್ನು ಪತ್ತೆ ಹಚ್ಚಲು ತಿರುಗಾಡುತ್ತಿರಬಾರದು, ಪತ್ತೇದಾರಿಕೆ ಮಾಡಬಾರದು. ಅವರ ಬಲಹೀನತೆಗಳನ್ನು ಹುಡುಕುತ್ತಾ ತಿರುಗಾಡಬಾರದು. ಹೀಗೆ ಮಾಡುವುದಾದರೆ ಒಂದು ಪ್ರೀತಿ ಭರಿತ ಶಾಂತಿ ಭರಿತ ಸಮಾಜವನ್ನು ಸೃಷ್ಟಿಸಲು ಸಾಧ್ಯವಾಗುವುದು. ನಮ್ಮವರಲ್ಲಿ ಬಹಳ ಜನರು ಹೇಗಿದ್ದಾರೆಂದರೆ ಅವರು ಅನ್ಯರ ತಪ್ಪುಗಳನ್ನು ಮರೆಮಾಡುವುದಕ್ಕೆ ಬದಲಾಗಿ ಅವರ ನ್ಯೂನತೆಗಳನ್ನು ಬಹಿರಂಗಪಡಿಸಲು ಪ್ರಯತ್ನಿಸುತ್ತಾರೆ. ಆದರೆ ತಮ್ಮ ವಿರುದ್ಧ ಯಾರಾದರೂ ಮಾತನಾಡಿದರೆ ಅಥವಾ ಆ ವಿಷಯ ಯಾರದಾದರೂ ಮುಖಾಂತರ ಅವರಿಗೆ ತಿಳಿದರೆ ಅವರು ಕೂಡಲೆ ಅತ್ಯಂತ ರೇಗಿಕೊಂಡು ಹೊಡೆಯಲು ಬಡಿಯಲು ಕೊಲ್ಲಲು ಸಿದ್ಧರಾಗುತ್ತಾರೆ. ನಾವು ಯಾವಾಗಲೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಉಪದೇಶವನ್ನು ನಮ್ಮ ಮುಂದೆ ಇರಿಸಬೇಕು. ನೀವು ನಿಮಗೋಸ್ಕರ ಏನನ್ನು ಇಚ್ಛಿಸುತ್ತೀರೋ ಅದನ್ನು ನಿಮ್ಮ ಸಹೋದರನಿಗೋಸ್ಕರ ಸಹ ಇಚ್ಛಿಸಿರಿ ಎಂದು ಪ್ರವಾದಿವರ್ಯರು ಉಪದೇಶಿಸಿದ್ದಾರೆ. ನೀವು ನಿಮ್ಮ ಕುಂದುಕೊರತೆಗಳ ಬಗ್ಗೆ ಪರದೆ ಹಾಕಬೇಕೆಂದು ಇಚ್ಛಿಸುವುದಾದರೆ ಇತರರ ಬಗ್ಗೆ ಸಹ ಹಾಗೆಯೇ ಇಚ್ಛಿಸಬೇಕು. ಇದು ಸಮಾಜದಲ್ಲಿ ಶಾಂತಿ ಸ್ಥಾಪನೆಗೆ ಸಹಾಯಕವಾದ ಸುವರ್ಣ ತತ್ವವಾಗಿದೆ.

ಆದುದರಿಂದ ಯಾರದಾದರೂ ತಪ್ಪನ್ನು ಕಂಡು ಅದನ್ನು ಪ್ರಚಾರ ಮಾಡುವುದಕ್ಕೆ ಬದಲಾಗಿ ಇಸ್ತಿಗ್‌ಫಾರ್ ಮಾಡಬೇಕು. ಅಲ್ಲಾಹನು ನಿರಾವಲಂಬಿಯಾಗಿದ್ದಾನೆ. ಆದುದರಿಂದ, ನಮ್ಮೊಳಗಿರುವ ಅನೇಕ ನ್ಯೂನತೆಗಳು ಬಹಿರಂಗ ಹೊಂದಬಾರದೆಂದು ನಾವು ಭಯಪಡಬೇಕಾಗಿದೆ. ಒಬ್ಬನು ಒಳ್ಳೆಯ ಸಂಕಲ್ಪದಿಂದ ಅನ್ಯರ ತಪ್ಪುಗಳ ಮೇಲೆ ಪರದೆ ಹಾಕುವುದಾದರೆ ಅವನು ಅಲ್ಲಾಹನ ಅನುಗ್ರಹಗಳಿಗೆ

ಪಾತ್ರನಾಗುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಈ ಮಾತನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು. ಅಲ್ಲಾಹನು ಜನರ ತಪ್ಪುಗಳಿಗೋಸ್ಕರ ಅವರನ್ನು ಹಿಡಿಗೂಡುವುದಾದರೆ ಯಾರೂ ಬಾಕಿಯಾಗಿ ಉಳಿಯಲಾರರು. ಇದು ಬಹಳ ಭಯಪಡಬೇಕಾದ ವಿಷಯವಾಗಿದೆ. ಯಾವಾಗಲೂ ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುತ್ತಾ ಇರಬೇಕು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಮ್ಮೆ ಹೀಗೆ ಹೇಳಿದ್ದರು: ಒಬ್ಬನು ತನ್ನ ಮುಸ್ಲಿಮ್ ಸಹೋದರನ ಯಾವುದಾದರೂ ನ್ಯೂನತೆಯನ್ನು ಮರೆ ಮಾಡಿದರೆ ಅಲ್ಲಾಹನು ಖಿಯಾಮತ್ ದಿನದಂದು ಅವನ ನ್ಯೂನತೆಯನ್ನು ಮರೆಮಾಡುವನು. ಯಾರಾದರೂ ತನ್ನ ಮುಸ್ಲಿಮ್ ಸಹೋದರನ ಯಾವುದಾದರೂ ನ್ಯೂನತೆಯ ಮೇಲಿನಿಂದ ಪರದೆ ಎತ್ತಿದರೆ, ಅವನ ಬಗ್ಗೆ ಕೆಟ್ಟ ಪ್ರಚಾರ ನಡೆಸಿದರೆ, ಅವನ ತಪ್ಪುಗಳನ್ನು ಜನರಲ್ಲಿ ಹರಡುತ್ತಾ ಇದ್ದರೆ ಅಲ್ಲಾಹನು ಅವನ ನ್ಯೂನತೆಗಳನ್ನು ಹೇಗೆ ಬಹಿರಂಗಪಡಿಸುವನೆಂದರೆ ಅವನು ಅವನ ಸ್ವಂತ ಮನೆಯಲ್ಲಿಯೂ ಅಪಮಾನಿತನಾಗುವನು. ಇದು ಬಹಳ ಕಠಿಣ ಮುನ್ನೆಚ್ಚರಿಕೆಯಾಗಿದೆ. ಬಹಳ ಭಯಪಡಬೇಕಾದ ವಿಷಯವಾಗಿದೆ. ಅಲ್ಲಾಹನ ಅನುಗ್ರಹ ಗಳಿಸಲು ಯಾವಾಗಲೂ ಮಾಡಬೇಕಾದುದೇನೆಂದರೆ ಅನ್ಯರ ತಪ್ಪುಗಳ ಕಡೆಗೆ ಗಮನ ಹರಿಸದೆ ತನ್ನ ಬಗ್ಗೆ ಶ್ರದ್ಧೆ ನೀಡಬೇಕಾಗಿದೆ. ಆಗ ಮಾತ್ರ ಅಲ್ಲಾಹನ ಅನುಗ್ರಹ ಮತ್ತು ದಯೆಯನ್ನು ಗಳಿಸಲು ಸಾಧ್ಯವಾಗುವುದು. ಕೆಲವರು ಹೇಳುತ್ತಾರೆ, ನಾವು ಒಬ್ಬನ ಕೆಡುಕನ್ನು ಬಹಿರಂಗಪಡಿಸದಿದ್ದರೆ ಸುಧಾರಣೆ ಮಾಡುವುದಾದರೂ ಹೇಗೆ? ಯಾವಾಗಲೂ ನೆನಪಿಡಬೇಕಾದುದೇನೆಂದರೆ ಒಬ್ಬನ ಕೆಟ್ಟ ಕೆಲಸ ಜಮಾಅತಿನ ನಿಝಾಮ್‌ಗೆ ನಷ್ಟವುಂಟುಮಾಡುವ ಮಾರ್ಗವಾಗುವುದಾದರೆ ಅಥವಾ ಸಮಾಜದ ಒಂದು ವಿಭಾಗವನ್ನು ವಶೀಕರಿಸಿ ಕೆಟ್ಟದಾಗಿ ಮಾಡುವುದಾದರೆ ಆಗ ಸುಧಾರಣೆ ಮಾಡಲು ನಿಶ್ಚಯಿಸಲ್ಪಟ್ಟ ಜನರಿಗೆ, ಅಮೀರ್ ಅಥವಾ ಸದರ್ ಜಮಾಅತ್‌ಗೆ ಈ ವಿಷಯ ತಿಳಿಸಬೇಕು. ಅಥವಾ ನನಗೆ ಬರೆದು ತಿಳಿಸಬಹುದು. ಆ ಮೂಲಕ ಸುಧಾರಣೆ ಮಾಡಬಹುದಾಗಿದೆ. ಆದರೆ ತಪ್ಪುಗಳನ್ನು ನೋಡಿ ಅದನ್ನು ಪ್ರಚಾರ ಮಾಡುವುದು ನಿಷಿದ್ಧವಾಗಿದೆ. ಏಕೆಂದರೆ ಹಾಗೆ ಮಾಡಿದರೆ ಕೆಡುಕು ಕೊನೆಗೊಳ್ಳವುದಕ್ಕೆ ಬದಲಾಗಿ ಹರಡಲು ಪ್ರಾರಂಭವಾಗುತ್ತದೆ. ಇದಕ್ಕೆ ಸಂಬಂಧಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದುದನ್ನು ನೆನಪಿಡಬೇಕು. ಅವರು ಹೇಳಿದರು: ನೀನು ಜನರ ಬಲಹೀನತೆಗಳ ಹಿಂದೆ ಬಿದ್ದರೆ ನೀನು ಅವರನ್ನು ಬಿಗಡಾಯಿಸುವೆ. ಬಲಹೀನತೆಗಳ ಹಿಂದೆ ಬೀಳುವುದೆಂದರೆ ಅವುಗಳ ಬಗ್ಗೆ ಅನೇಕ ಸ್ಥಳಗಳಲ್ಲಿ ಪ್ರಸ್ತಾಪಿಸುವುದು, ಅವರ ಬಲಹೀನತೆಗಳನ್ನು ಹುಡುಕುತ್ತಾ ಇರುವುದು. ಹೀಗೆ ಮಾಡಿದರೆ ಜನರು ಬಿಗಡಾಯಿಸುವರು. ಸಮಾಜದಲ್ಲಿ ಶಾಂತಿ ಇಲ್ಲದಾಗುವುದು. ಈ ವಿಷಯ ವಿವಿಧ ಸ್ಥಳಗಳಲ್ಲಿ ಪ್ರಚಾರ ಮಾಡಿದರೆ ಕೆಟ್ಟ ಕೆಲಸ ಮಾಡುವವರಲ್ಲಿ ಸುಧಾರಣೆ ಉಂಟಾಗುವುದಕ್ಕೆ ಬದಲಾಗಿ ಅವರಲ್ಲಿ ಹಠಮಾರಿತನ ಉಂಟಾಗುವುದು. ಅವರು ಅನ್ಯರನ್ನೂ ತಮ್ಮಂತೆ ವರ್ತಿಸುವಂತೆ ಮಾಡುವರು. ಅವರ ಗುಂಪು ವಿಶಾಲವಾಗುವುದು. ಪರದೆ ಇಲ್ಲದಾಗುವುದು. ಪರದೆ ಇಲ್ಲದಾಗುವಾಗ ಸುಧಾರಣೆಯ ಪಾರ್ಶ್ವವೂ ಕೊನೆಗೊಳ್ಳುತ್ತದೆ.

ಆದುದರಿಂದ ಜಮಾಅತಿನ ಕೆಲಸ ಮಾಡುವ, ಇಸ್‌ಲಾಹ್ ಮಾಡುವ ವಿಭಾಗದ ಶ್ರದ್ಧೆಯನ್ನು ನಾನು ಈ ವಿಷಯದ ಕಡೆಗೆ ಸೆಳೆಯಲು ಇಚ್ಛಿಸುತ್ತೇನೆ. ಅವರು ಅತ್ಯಂತ ಜಾಗರೂಕರಾಗಿ ಸಹಾನುಭೂತಿ ಹೊಂದಿ ಇಸ್‌ಲಾಹ್ ಕೆಲಸ ಮಾಡಬೇಕು. ಯಾವನೇ ವ್ಯಕ್ತಿ, ನನ್ನ ಬಲಹೀನತೆ ಇಂತಿಂತಹ ಹುದ್ದೇದಾರನ ಮೂಲಕ ಬಹಿರಂಗಗೊಂಡಿತು ಎಂದು ಭಾವಿಸುವಂತಿರಬಾರದು. ಇಂತಹ ಭಾವನೆ ಯಾರಲ್ಲಾದರೂ ಉಂಟಾದರೆ ಅದರ ಪರಿಣಾಮ ಹೆಚ್ಚು ಕಠಿಣವಾಗಿರುತ್ತದೆ. ಅಂತಹ ಹುದ್ದೇದಾರನೊಂದಿಗೆ ಅಲ್ಲಾಹನು ಹೇಳುವನು: ನಾನು ನಿನಗೆ ಜಮಾಅತಿಗೆ ಸೇವೆ ಮಾಡಲು ಸಂದರ್ಭ ಒದಗಿಸಿದ್ದೆನು. ಆದುದರಿಂದ ನನ್ನ ಗುಣಗಳನ್ನು ನೀನು ಹೆಚ್ಚು ಹೆಚ್ಚಾಗಿ ನಿನ್ನಲ್ಲಿ ಅಳವಡಿಸಬೇಕಾಗಿತ್ತು. ಆದರೆ ನೀನು ಇಲ್ಲಿ ನನ್ನ ಸತ್ತಾರ್ ಗುಣಕ್ಕೆ ವಿರುದ್ಧವಾಗಿ ವರ್ತಿಸಿ ಆತಂಕ ಮತ್ತು ಜಗಳವನ್ನು ಉಂಟುಮಾಡಿರುವೆ.

ಅಲ್ಲಾಹನಿಗೆ ಸತ್ತಾರಿ (ಮರೆಮಾಡುವಿಕೆ) ಎಷ್ಟು ಪ್ರಿಯವಾಗಿದೆ ಮತ್ತು ಹಾಗೆ ಮರೆಮಾಡುವವನಿಗೆ ಹೇಗೆ ಅನುಗ್ರಹ ನೀಡುತ್ತಾನೆ ಎಂಬುದರ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಮ್ಮೆ ಹೀಗೆ ಹೇಳಿದರು: ಮುಸ್ಲಿಮನು ಮುಸ್ಲಿಮನ ಸಹೋದರನಾಗಿದ್ದಾನೆ. ಅವನ ಮೇಲೆ ದೌರ್ಜನ್ಯ ಮಾಡಬಾರದು. ಅವನನ್ನು ಒಬ್ಬಂಟಿಗನಾಗಿ ಬಿಡಬಾರದು. ಯಾರು ತನ್ನ ಸಹೋದರನ ಆವಶ್ಯಕತೆಯನ್ನು ಈಡೇರಿಸಲು ಪ್ರಯತ್ನಿಸುತ್ತಾನೋ ಅಲ್ಲಾಹನು ಅವನ ಆವಶ್ಯಕತೆಗಳನ್ನು ಈಡೇರಿಸಿಕೊಡುವನು. ಯಾರಾದರೂ ಮುಸ್ಲಿಮರ ಕಷ್ಟ ನಿವಾರಣೆ ಮಾಡಿದರೆ ಖಿಯಾಮತ್ ದಿನ ಅಲ್ಲಾಹನು ಅವರ ಒಂದು ಕಷ್ಟವನ್ನು ಕಡಿಮೆ ಮಾಡುವನು. ಒಬ್ಬನು ಮುಸ್ಲಿಮನ ಕುಂದು ಕೊರತೆಗಳನ್ನು ಮರೆ ಮಾಡಿದರೆ ಖಿಯಾಮತ್ ದಿನ ಅಲ್ಲಾಹನು ಅವನ ಕುಂದುಕೊರತೆಗಳನ್ನು ಮರೆಮಾಡುವನು.

ಆದುದರಿಂದ **ರಹೀಮ್** ಮತ್ತು **ಕರೀಮ್** ಆಗಿರುವ ಅಲ್ಲಾಹನ **ರಹಮ್** ಮತ್ತು **ಕರಮ್**‌ಗಳನ್ನು ಗಳಿಸಲು ಸತ್ತಾರಿ ಅಥವಾ ತಪ್ಪುಗಳ ಮೇಲೆ ಪರದೆ ಹಾಕುವುದು ಅತ್ಯಂತ ಆವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಂದರ್ಭದಲ್ಲಿ ಹೀಗೆ ಹೇಳಿದರು: "ಮನುಷ್ಯನ ವಿಶ್ವಾಸದ ಪರಿಪೂರ್ಣತೆ, **ತಖಲ್ಲುಖು ಬಿ ಅಖ್‌ಲಾಖಿಲ್ಲಾಹ್**‌ನಲ್ಲಿದೆ. ಎಂದರೆ ಅಲ್ಲಾಹನಲ್ಲಿರುವ ಶ್ರೇಷ್ಠ ಗುಣಗಳನ್ನು ತನ್ನ ಶಕ್ತಿ ಸಾಮರ್ಥ್ಯಕ್ಕನುಸಾರವಾಗಿ ಅನುಸರಿಸಬೇಕು. ಹಾಗೆ ತನ್ನನ್ನು ಅಲ್ಲಾಹನ ವರ್ಣವನ್ನು ಹೊಂದಿದವನನ್ನಾಗಿ ಮಾಡಲು ಪ್ರಯತ್ನ ಮಾಡಬೇಕು." ಉದಾಹರಣೆಗೆ ಅಲ್ಲಾಹನಲ್ಲಿ ಕ್ಷಮಾಗುಣವಿದೆ. ಮನುಷ್ಯನೂ ಕ್ಷಮಿಸಬೇಕು. ಅಲ್ಲಾಹನು ಸತ್ತಾರ್ ಆಗಿದ್ದಾನೆ. ಮನುಷ್ಯನೂ ಸತ್ತಾರ್ ಆಗಲು ಪ್ರಯತ್ನಿಸಬೇಕು. ಜನರ ಮಧ್ಯೆ ಹಾಸ್ಯ ವಿನೋದದ ವಾತಾವರಣ ಸೃಷ್ಟಿಸಲು ಅನ್ಯರ ಕೆಡುಕುಗಳನ್ನು ಬಹಿರಂಗಪಡಿಸುವುದು ಅತ್ಯಂತ ದೊಡ್ಡ ಪಾಪ ಕೃತ್ಯವಾಗಿದೆ. ಹೀಗೆ ಮಾಡುವುದರಿಂದ ಪ್ರತಿಯೊಬ್ಬ ಅಹ್ಮದಿ ತನ್ನನ್ನು ರಕ್ಷಿಸಿಕೊಳ್ಳಬೇಕು. ಒಬ್ಬನ ಬಲಹೀನತೆಯನ್ನು ಕಂಡಾಗ ಸರಿಯಾಗಿ ಸಹಾನುಭೂತಿ ಸೂಚಿಸುವ ವಿಧಾನವೇನೆಂದರೆ ಅವನನ್ನು ಸುಧಾರಣೆ ಮಾಡಲು ಪ್ರಯತ್ನಿಸಬೇಕು. ಅವನಲ್ಲಿ ಆ ಬಲಹೀನತೆ ನಿವಾರಣೆಯಾಗುವಂತೆ ಮಾಡಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಯಾರದಾದರೂ ಬಲಹೀನತೆಯನ್ನು ಕಂಡರೆ ಅವನಿಗೆ ರಹಸ್ಯವಾಗಿ ಉಪದೇಶಿಸಬೇಕು. ಅವನನ್ನು ಕರೆದು ಉಪದೇಶಿಸಿದಾಗ ಉಪದೇಶ ಸ್ವೀಕರಿಸದಿದ್ದರೆ ಅವನಿಗೋಸ್ಕರ ಪ್ರಾರ್ಥಿಸಬೇಕು. ಪ್ರಾರ್ಥನೆಯು ಬಹಳ ಪ್ರಭಾವಶಾಲಿಯಾಗಿದೆ. ಒಬ್ಬನು ಇನ್ನೊಬ್ಬನ ನ್ಯೂನತೆ ಬಗ್ಗೆ ನೂರು ಸಾರಿ ಹೇಳುತ್ತಾ ಇದ್ದು ಒಮ್ಮೆ ಸಹ ಅವನ ಪರವಾಗಿ ಪ್ರಾರ್ಥಿಸದೆ ಇರುವವನ ಬಗ್ಗೆ ಖೇದವಿದೆ. ಒಬ್ಬನ ನ್ಯೂನತೆ ಕಂಡು ಅದನ್ನು ಇತರರ ಮಧ್ಯೆ ಬಹಿರಂಗಪಡಿಸುವ ಮೊದಲು ನಲ್ವತ್ತು ದಿನ ಅಳುತ್ತಾ ಅವನ ಸುಧಾರಣೆಗಾಗಿ ಪ್ರಾರ್ಥಿಸಬೇಕಾಗಿದೆ. ನಾವು ಹೇಳಿದರ ಉದ್ದೇಶ, ನ್ಯೂನತೆ ಹೊಂದಿದವರನ್ನು ಬೆಂಬಲಿಸಬೇಕೆಂದಲ್ಲ. ಬದಲಾಗಿ ಅವರ ಬಗ್ಗೆ ಪ್ರಚಾರ ಮಾಡಬಾರದು ಮತ್ತು ಪರದೂಷಣೆ ಮಾಡಬಾರದು ಎಂದೇ ನಮ್ಮ ಉದ್ದೇಶವಾಗಿದೆ. ಆ ನ್ಯೂನತೆ ಬಗ್ಗೆ ಜನರ ಮುಂದೆ ಅಥವಾ ಹಿಂದೆ ಪ್ರಚಾರ ಮಾಡಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ದಯೆ, ಪ್ರಾರ್ಥನೆ, ಕುಂದು ಕೊರತೆಗಳಿಗೆ ಪರದೆ ಹಾಕುವಿಕೆ ಇವುಗಳು ಪರಸ್ಪರ ಇಲ್ಲದಿದ್ದರೆ ಈ ಜಮಾಅತ್ ಅಭಿವೃದ್ಧಿ ಹೊಂದಲಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮನ್ನು ಹೇಗೆ ಕಾಣಲು ಬಯಸುತ್ತಾರೆ? ನಾವು ಒಬ್ಬರಿನ್ನೊಬ್ಬರ ಬಗ್ಗೆ ದಯೆಯನ್ನು ಹೊಂದುವವರಾಗಬೇಕು. ನಾವು ಒಬ್ಬರಿನ್ನೊಬ್ಬರಿಗೋಸ್ಕರ ಪ್ರಾರ್ಥಿಸುವವರಾಗಬೇಕು. ನಾವು ಒಬ್ಬರಿನ್ನೊಬ್ಬರ ಕುಂದುಕೊರತೆಗಳನ್ನು ಮರೆಮಾಡುವವರಾಗಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಸಂದರ್ಭದಲ್ಲಿ ಹೇಳಿದರು: ನಮ್ಮ ಜಮಾಅತ್ ಮಾಡಬೇಕಾದುದೇನೆಂದರೆ, ಒಬ್ಬ ಸಹೋದರನ ನ್ಯೂನತೆಯನ್ನು ಕಂಡಾಗ ಅವನಿಗೋಸ್ಕರ ಪ್ರಾರ್ಥಿಸಬೇಕು. ಆದರೆ ಅವನಿಗೋಸ್ಕರ ಪ್ರಾರ್ಥಿಸದೆ ಅವನ ನ್ಯೂನತೆ ಪ್ರಚಾರ ಮಾಡುವವರು ಪಾಪಕೃತ್ಯ ಮಾಡುವವರಾಗಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಹೋಗಲಾಡಿಸಲಾಗದ ನ್ಯೂನತೆಯಾದರೂ ಯಾವುದು? ಆದುದರಿಂದ ಪ್ರಾರ್ಥನೆಯ ಮೂಲಕ ನ್ಯೂನತೆ ಇರುವ ಸಹೋದರನಿಗೆ ಸಹಾಯ ಮಾಡಬೇಕು.

ನಾವು ಈರೀತಿ ಒಬ್ಬರಿನ್ನೊಬ್ಬರಿಗೆ ಸಹಾಯ ಮಾಡುವವರಾದರೆ, ಅನ್ಯರನ್ನು ದೂಷಿಸುವುದಕ್ಕೆ ಬದಲಾಗಿ ಅನ್ಯರ ತಪ್ಪುಗಳನ್ನು ಮರೆಮಾಡಿ ಒಬ್ಬರಿನ್ನೊಬ್ಬರಿಗೋಸ್ಕರ ಪ್ರಾರ್ಥಿಸುವುದಾದರೆ, ಆಗ ಮಾತ್ರ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿರ್ಮಿಸಲು ಬಯಸಿದ ನೈಜ ಜಮಾಅತ್ ಆಗುವೆವು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳ ಪ್ರಕಾರ ಪ್ರತಿಯೊಬ್ಬ ನೈಜ ಮುಸ್ಲಿಮನ ಸ್ಥಿತಿ ಹೀಗೆಯೇ ಆಗಬೇಕು. ಇದೇ ಸ್ಥಿತಿ ನಮಗೆ ಕ್ಷಮೆ ಲಭಿಸುವಂಥದ್ದೂ ನಮ್ಮ ನ್ಯೂನತೆಗಳ ಮೇಲೆ ಪರದೆ ಹಾಕುವಂಥದ್ದೂ ಆಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಾಹನ ಸಂರಕ್ಷಣೆಗಳಿಸಲು ಮತ್ತು ಅವನ ಅನುಗ್ರಹಗಳನ್ನು ಗಳಿಸಲು ಒಂದು ಪ್ರಾರ್ಥನೆಯನ್ನು ಕಲಿಸಿದ್ದಾರೆ. ಆ ಪ್ರಾರ್ಥನೆ ನಾವು ಮಾಡುತ್ತಾ ಇರಬೇಕು. ಅದು ಹೀಗಿದೆ: ಓ ಅಲ್ಲಾಹ್, ನಾನು ಇಹಲೋಕದಲ್ಲೂ ಪರಲೋಕದಲ್ಲೂ ನಿನ್ನ ಸಂರಕ್ಷಣೆಯನ್ನು ಯಾಚಿಸುತ್ತೇನೆ. ಓ ನನ್ನ ಯಜಮಾನ, ಧರ್ಮ, ಇಹಲೋಕ, ಸಂಪತ್ತು ಮತ್ತು ಮನೆಗೆ ಸಂಬಂಧಿಸಿ ಕ್ಷಮೆಯನ್ನೂ ಸಂರಕ್ಷಣೆಯನ್ನೂ ಬೇಡಿಕೊಳ್ಳುತ್ತೇನೆ. ಓ ಅಲ್ಲಾಹ್ ನನ್ನ ಬಲಹೀನತೆಗಳನ್ನು ಮರೆಮಾಡು. ನನಗೆ ಭಯಗಳಿಂದ ಅಭಯ ದಯಪಾಲಿಸು. ಓ ಅಲ್ಲಾಹ್, ನನ್ನ ಹಿಂದೆ, ಮುಂದೆ, ಎಡಬಲ ಮತ್ತು ಮೇಲ್ಭಾಗದಿಂದ ನೀನು ಸ್ವತಃ ನನ್ನನ್ನು ಸಂರಕ್ಷಿಸು. ನನ್ನ ಕೆಳಭಾಗದಿಂದಲೂ ಯಾವುದಾದರೂ ರಹಸ್ಯ ವಿಪತ್ತು ನನ್ನನ್ನು ಬಾಧಿಸದಂತೆ ನಾನು ನಿನ್ನ ಮಹಿಮೆಯ ಆಶ್ರಯ ಬೇಡಿಕೊಳ್ಳುತ್ತೇನೆ. ನಾವು ನಮಗೋಸ್ಕರ ಈ ಪ್ರಾರ್ಥನೆ ಮಾಡುವುದಾದರೆ ಮತ್ತು ಅನ್ಯರಿಗೋಸ್ಕರ ಈರೀತಿ ಭಾವನೆಗಳನ್ನು ಹೊಂದುವವರಾದರೆ ಅಲ್ಲಾಹನು ನಮ್ಮ ಪ್ರಾರ್ಥನೆಗಳನ್ನು ಅಂಗೀಕರಿಸುವನು. ಅಲ್ಲಾಹನು ನಮ್ಮನ್ನು ಅವನ ಸಂಪ್ರೀತಿ ಗಳಿಸುವವರಾಗುವಂತೆ ಮಾಡಲಿ – ಆಮೀನ್.

(ಖುತ್‌ಬದ ಕೊನೆಗೆ ಹುಝೂರ್ ಹೇಳಿದರು–) ಜುಮುಅ ನಮಾಝ್ ನಂತರ ಒಂದು ಜನಾಝ ಗಾಯಿಬ್ ನಿರ್ವಹಿಸುವೆನು. ಅದು ಮುಕರ್ರಮ್ ಸಲೀಮ್ ಸಾಹಿಬ್ ಎಡ್ವಕೇಟ್, ಸದರ್ ಜಮಾಅತ್ ನನ್‌ಕಾನ (ಪಾಕಿಸ್ಥಾನ) ಅವರದಾಗಿದೆ. ಅವರು ಮುಕರ್ರಮ್ ಮಲಿಕ್ ಮುಹಮ್ಮದ್ ಶಫೀ ಸಾಹಿಬರ ಪುತ್ರರು. ಅವರ ಪ್ರಾಯ 70 ವರ್ಷ. ಮಾರ್ಚ್ ದಿನಾಂಕ 3ರಂದು ಬೆಳಗ್ಗೆ ಅಂದಾಜು 9 ಗಂಟೆಗೆ ತಮ್ಮ ಮಗನೊಂದಿಗೆ ತನ್ನ ಆಫೀಸಿಗೆ ಹೋಗುತ್ತಿದ್ದಾಗ ಅಹ್ಮದಿಯ್ಯತ್ತಿನ ಒಬ್ಬ ಶತ್ರು ಬಂದೂಕಿನಿಂದ ಗುಂಡು ಹಾರಿಸಿ ಅವರನ್ನು ಶಹೀದರನ್ನಾಗಿ ಮಾಡಿದನು – ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.

(ಹುಝೂರ್, ಶಹೀದರ ಸದ್ಗುಣಗಳನ್ನು ವಿವರಿಸಿದ ನಂತರ ಹೇಳಿದರು) ಅಲ್ಲಾಹನು ಶಹೀದರಿಗೆ ಉನ್ನತ ಪದವಿ ದಯಪಾಲಿಸಲಿ. ಅವರ ಮಕ್ಕಳನ್ನು ಅವರ ಹೆಜ್ಜೆ ಗುರುತುಗಳಲ್ಲಿ ಚಲಾಯಿಸಲಿ ಮತ್ತು ಒಳಿತಿನಲ್ಲಿ ಮುಂದೆ ಸಾಗಿಸುತ್ತಾ ಇರಲಿ. ಅಹ್ಮದಿಯ್ಯತ್ತಿನ ವಿರೋಧಿಗಳನ್ನು ಮತ್ತು ಶತ್ರುಗಳನ್ನು ಬೇಗನೆ ಹಿಡಿಗೂಡುವಂತೆ ಮಾಡಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At, Masjid Baithul Futhuh, London on 31-03-2017.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim | ***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon